ವಿಜಾಪುರ ನಗರದಲ್ಲಿ ಸಾರಿಗೆ ವ್ಯವಸ್ಥೆ

329 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿರುವ ನಗರ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು.

ಆ) ನಗರ ಸಾರಿಗೆ ಬಸ್ಸುಗಳ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ನಗರದ 25 ಕಿ.ಮೀ. ಸಮೀಪವಿರುವ ಗ್ರಾಮೀಣ ಪ್ರದೇಶಗಳಿಗೆ ನಗರ ಸಾರಿಗೆ ಬಸ್ಸುಗಳನ್ನು ಬಿಡುವ ವ್ಯವಸ್ಥೆ ಸರ್ಕಾರ ಮಾಡುವುದೇ.

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸುವುದು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು):

ಅ) 23 ಬಸ್ಸುಗಳು.

ಆ) ಮೇಲಿನ ಬಸ್ಸುಗಳು ಪ್ರಸಕ್ತ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

12.10 ಪಿ.ಎಂ

ಶ್ರೀ ಬಸವನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರದ ನಗರ ಸಾರಿಗೆಗೆ ಕೇವಲ 23 ಬಸ್ ಇರುವುದರ ಹಿನ್ನೆಲೆಯಲ್ಲಿ ಸುಮಾರು ಎರಡೂವರೆ ಮೂರು ಲಕ್ಷ ಜನಸಂಖ್ಯೆ ಇದ್ದಂಥ ಈ ನಗರದಲ್ಲಿ ಕನಿಷ್ಟ ಇನ್ನೂ ಹತ್ತು ಬಸ್ಸುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಪ್ರಮುಖವಾದಂಥದ್ದು ಗ್ರಾಮೀಣ ಪ್ರದೇಶದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಓಡಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಆದರೆ ಸನ್ಮಾನ್ಯ ಅಧ್ಯಕ್ಷರೇ ವಿಶೇಷವಾಗಿ ನಗರ ಪ್ರದೇಶದ ಸುತ್ತಮುತ್ತಲಿರುವಂಥ ಹಳ್ಳಿ ಪ್ರದೇಶಗಳಿಗೆ ಗ್ರಾಮೀಣ ಬಸ್ಸುಗಳನ್ನು ಓಡಿಸುವ ಬಗ್ಗೆ ಸರಿಯಾಗಿ ಅಲ್ಲಿಯ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಅಷ್ಟು ಒಳ್ಳೆಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಿಲ್ಲ. ಕೇವಲ ಲಾಂಗ್ ರೂಟಗೆ ಗಮನ ಹರಿಸುತ್ತಾರೆ. ದೂರ ಹೋಗುವುದರಿಂದ ಹೆಚ್ಚು ತಮಗೆ ಲಾಭ ಬರುತ್ತದೆ ಎಂಬ ಹಿನ್ನೆಲೆಯಲ್ಲಿ ಅನೇಕ ಗ್ರಾಮೀಣ ಪ್ರದೇಶದಲ್ಲಿ ಇವತ್ತು ಸಾರಿಗೆ ವ್ಯವಸ್ಥೆ ಸರಿಯಾಗಿ ಇಲ್ಲ. ದಯವಿಟ್ಟು ಸರ್ಕಾರ ನಗರ ಪ್ರದೇಶದ ಸುತ್ತಮುತ್ತ ಇರತಕ್ಕ 25 ಕಿಲೋಮೀಟರ್ ಪ್ರದೇಶದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಓಡಿಸಿದರೆ, ಅದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗುತ್ತದೆ ಎನ್ನುವ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

ಶ್ರೀ ಕೆ. ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ವಿಚಾರವನ್ನು ನಾನು ಒಪ್ಪುತ್ತೇನೆ. ಈ ವರ್ಷದ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರಿಗೆ ನಗರಗಳಿಗೆ ಈ ಪ್ರದೇಶಗಳಲ್ಲಿ ಓಡುವಷ್ಟು

ಬಸ್ಸುಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ನಗರ ಸಾರಿಗೆಗಳನ್ನು ಮೂರು ವಲಯಗಳನ್ನಾಗಿ ಮಾಡಬಹುದು ಈ ನಗರ ಸಾರಿಗೆ, ನಗರದ ಹೊರವಲಯದ ಸಾರಿಗೆ, ಮತ್ತು ಗ್ರಾಮೀಣ ಸಾರಿಗೆ. ಈ ನಗರದ ಸಾರಿಗೆಯು ನಗರದ ಲಿಮಿಟನಲ್ಲಿ ಓಡುತ್ತಿರುತ್ತದೆ. ಈ ಗ್ರಾಮೀಣ ಹೊರವಲಯ ಸಾರಿಗೆ ಎಂದರೆ ಬಿಜಾಪುರ ನಗರದ ಹೊರ ವಲಯದಲ್ಲಿ ಅಂದರೆ ನಗರದ 12 ಕಿ.ಮೀ. ವರೆಗೆ ಬಸ್ಸುಗಳನ್ನು ಓಡಿಸುತ್ತೇವೆ. ಅದಾದಮೇಲೆ ಗ್ರಾಮೀಣ ಸಾರಿಗೆ ಎಂದು ಓಡಿಸುತ್ತೇವೆ. ಈಗಾಗಲೇ ಬಿಜಾಪುರದಲ್ಲಿ 108 ಹಳ್ಳಿಗಳಲ್ಲಿ 107 ಹಳ್ಳಿಗಳಿಗೆ ಈ ಬಸ್ಸುಗಳ ಸೇವೆಯನ್ನು ಒದಗಿಸಲಾಗಿದೆ. ಇನ್ನು ನಮ್ಮ ವಿಶೇಷವಾದಂಥ ಜನರಿಗೆ ವಿಶೇಷವಾಗಿ ಈ ಬಸ್‌ಗಳನ್ನು ಪ್ರತಿಯೊಂದು ತಾಲ್ಲೂಕಿಗೆ ಒದಗಿಸುವಂಥ ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಹಳ್ಳಿಗೂ 5-6 ಬಸ್ಸುಗಳನ್ನು ಆದರೂ ಕೊಡಬೇಕು ಎನ್ನುವುದು ಇತ್ತು. ಆದರೆ ಈಗಾಗಲೇ ಎರಡೆರಡು ಬಸ್ಸುಗಳನ್ನು ಪ್ರತಿಯೊಂದು ತಾಲ್ಲೂಕಿಗೆ ಕೊಡುವುದಕ್ಕೆ ಈಗ ತಯಾರಿ ನಡೆದಿದೆ. 58 ಬಸ್ಸುಗಳನ್ನು ಈಗಾಗಲೇ ಕೊಟ್ಟಾಗಿದೆ. ಅದಲ್ಲದೆ ಈ ಸಂದರ್ಭದಲ್ಲಿ ನಾವು ನಗರದ 12 ಕೀ.ಮೀ. ಲಿಮಿಟನಿಂದ 30 ಕಿ.ಮೀಟರ್‌ವರೆಗೆ ಬಸ್ಸುಗಳನ್ನು ಓಡಿಸುವಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಬೆಂಗಳೂರಿನಲ್ಲಿ ಈಗಾಗಲೇ 22 ಕಿ.ಮೀಟರವರೆಗೆ ಬಸ್ಸುಗಳನ್ನು ಓಡಿಸುತ್ತಾ ಇದ್ದೇವೆ. ಈ ವರ್ಷದೊಳಗೆ ಈ ಒಂದು ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಸಾರಿಗೆ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಬಿಜಾಪುರ ನಗರ ಹೊಸದಾಗಿ 42 ಬಡಾವಣೆಗಳನ್ನು ಹೊಂದಿದೆ. ಇಲ್ಲಿ ಆರೇಳು ವರ್ಷಗಳ ಹಿಂದೆ 23 ಬಸ್ಸುಗಳು ಇದ್ದದ್ದು ನಗರದ ವ್ಯಾಪ್ತಿ ಸುಮಾರು 267 ಕಿ.ಮೀಟರನಷ್ಟು ಹಬ್ಬಿಕೊಂಡಿದೆ. ಆದ್ದರಿಂದ ಈ 23 ಬಸ್ಸುಗಳು ಸಾಕಾಗುವುದಿಲ್ಲ. ಇದು ಒಂದನ್ನು ಸಾರಿಗೆ ಸಚಿವರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. 2ನೆಯದು ಬಿಜಾಪುರ ವಿಭಾಗದಲ್ಲಿ 90 ಬಸ್ಸುಗಳು ಆಫ್ ದಿ ರೋಡ್ ಇದೆ. ಅದರ ಬಗ್ಗೆ ಸಾರಿಗೆ ಸಚಿವರ ಗಮನಕ್ಕೆ ಮೇಲಿಂದ ಮೇಲೆ ಕಂಪ್ಲೇಂಟ್ ಮಾಡಿದ್ದೇನೆ. ಈ ಬಿಜಾಪುರ ವಿಭಾಗ ರಾಜ್ಯದಲ್ಲಿ ಮೊದಲನೆಯ ಸ್ಥಾನದಲ್ಲಿ ಇತ್ತು. ಇವತ್ತು ಅದು 13ನೇ ಸ್ಥಾನಕ್ಕೆ ಹೋಗಿದೆ. ಇದಕ್ಕೆ ನಾವು ತಮಗೊಂದು ಕೂಲಂಕಷವಾದ ಮನವಿಯನ್ನು ಕೊಟ್ಟಿದ್ದೆವು. ಇದು ಏಕೆ ಹೇಗೆ ಆಗುತ್ತದೆ? ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ತಾವು ಅದೇ ರೀತಿಯಾಗಿ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾ ಇಲ್ಲ. ನಮಗೆ ಸ್ವಲ್ಪ ಭಯವಾಗಿದೆ. ಇನ್ನೊಂದು ಸಲ ಹಾಗೆ ಮಾಡಿದರೆ, ಬಿಜಾಪುರ ವಿಭಾಗವನ್ನು ಮುಚ್ಚುವ ಸಮಯ ಬರುತ್ತದೆ. ದಯವಿಟ್ಟು ನೀವು ಬಿಜಾಪುರ ನಗರ ಎಷ್ಟು ದೊಡ್ಡದು ಇದೆ ಎಂಬುದನ್ನು ಸ್ವಲ್ಪ ಗಮನದಲ್ಲಿಟ್ಟು ಕೊಂಡರೆ ಒಳ್ಳೆಯದು. ಬಿಜಾಪರು ಸುತ್ತಮುತ್ತ ಇರತಕ್ಕಂಥ ಹಳ್ಳಿಗಳು ಕೇವಲ 25 ಕಿ.ಮೀಟರ್ ರೇಡಿಯಸನಲ್ಲಿ ಇದ್ದಾವೆ. ಬಹಳ ದೂರ ಇಲ್ಲ. ತಾವು ಈಗಾಗಲೇ ಇದನ್ನು 30 ಕಿ. ಮೀಟರಗೆ ವಿಸ್ತರಣೆ ಮಾಡಿದರೆ, ನಮಗೆ ಸ್ವಲ್ಪ ಟೆನಷನ್ ಕಡಿಮೆ ಆಗಬಹುದು. ಅಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ. 1ನೇ ಸ್ಥಾನದಲ್ಲಿ ಇದ್ದಂಥ ಬಿಜಾಪುರ ವಿಭಾಗ ಈಗ 13ನೇ ಸ್ಥಾನದಲ್ಲಿ ಇರಬೇಕಾದರೆ ಅದಕ್ಕೆ ಕಾರಣೀಭೂತರಾದವರು ಯಾರು ಎನ್ನತಕ್ಕಂಥದನ್ನು ದಯಮಾಡಿ ತೀವ್ರವಾಗಿ ಪರಿಶೀಲನೆ ಮಾಡಿ, ಕ್ರಮವನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಸದಸ್ಯರ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಶೇಖರ ಸದಾಶಿವನಾಯಕ್ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಗೋಕಾಕ್ ತಾಲ್ಲೂಕಿನಲ್ಲಿ ಸುಮಾರು 9 ಹಳ್ಳಿಗಳಿಗೆ ಬ್ರಿಟಿಷರ ಕಾಲದಿಂದ ಬಸ್ಸುಗಳು ಹೋಗಿದೆಯೆಂದು ನೋಡಿಲ್ಲ. ಸಣ್ಣ ಮಕ್ಕಳು ಬಸ್ಸು ಹೇಗೆ ಇರುತ್ತದೆ ಎಂದು ಕೇಳುತ್ತಾರೆ ಅವರ ತಂದೆ ತಾಯಿಗಳು ಸಂತೆಗೆ ಹೋದಾಗ ಅವರುಗಳು ಸೌಕರ್ಯವಿಲ್ಲ. ಅದನ್ನು ಒದಗಿಸಿಕೊಡುವ ಸಲುವಾಗಿ ಮುಖ್ಯಮಂತ್ರಿಗಳಲ್ಲಿ ನಾನು ಎರಡು ಸಾರಿ ಮನವಿ ಮಾಡಿಕೊಂಡಿದ್ದೇವೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ತಮ್ಮ ಮೂಲಕ ಒಂದು ಹೇಳಿಕೆಯನ್ನು ಕೊಡಬೇಕು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಸದಸ್ಯರ ಪ್ರಶ್ನೆ ಬೇರೆ ತಾಲ್ಲೂಕಿಗೆ ಸಂಬಂಧಪಟ್ಟಿದ್ದು ಆದರೂ ಸಹ ಅವರ ತಾಲ್ಲೂಕಿನಲ್ಲಿ ಏನೊದು ಕೆಲವು ಹಳ್ಳಿಗಳ ವಿಚಾರವನ್ನು ಅವರು ನನ್ನ ಗಮನಕ್ಕೆ ತಂದಿರುತ್ತಾರೆ. ಈ ವಿಚಾರದ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ವಿಚಾರ ಮಾಡಿ ಕೇಳಿದಾಗ, ಅಲ್ಲಿಯ ರಸ್ತೆಗಳು ಸರಿ ಇಲ್ಲದಿರುವುದರಿಂದ ಬಸ್ಸುಗಳನ್ನು ಓಡಿಸುವುದಕ್ಕೆ ಅನಾನುಕೂಲವಾಗಿದೆ. ರಸ್ತೆಯನ್ನು ಸರಿ ಮಾಡಿದ ಕೂಡಲೇ ಬಸ್ಸುಗಳನ್ನು ಓಡಿಸುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಹೇಳಲು ಇಷ್ಟ ಪಡುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಬಂದಿದ್ದು ನಿನ್ನೆಯ ದಿವಸ. ತಾವು ಈ ವಿಚಾರದ ಪ್ರಾಮುಖ್ಯತೆಯನ್ನು ಅರಿತು ಇವತ್ತು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇದು ಇಡೀ ರಾಜ್ಯದಲ್ಲಿ ಇರತಕ್ಕಂಥ ಸಮಸ್ಯೆ. ಇವತ್ತು ನಗರ ಪ್ರದೇಶದಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆ ಹೇಗಿದೆ ಎಂದರೆ, ನಗರದಲ್ಲಿ ಸುವಿಹಾರಿ ಬಸ್ಸುಗಳನ್ನು ಹಾಕಿಸುತ್ತೇವೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ದಿವಸ ಬೆಳಿಗ್ಗೆ ಮಕ್ಕಳಿಗೆ ಶಾಲೆಗೆ, ಕಾಲೇಜಿಗೆ ಹೋಗಿಬರಲು ಬಸ್ಸುಗಳನ್ನು ಕೊಟ್ಟರೆ ಡಿಪೋದಲ್ಲಿ ರಿಪೇರಿ ಮಾಡಿಸಿಕೊಂಡು ನಗರ ಪ್ರದೇಶದಿಂದ 25 ಕಿ.ಮೀಟರ್ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬಸ್ಸುಗಳನ್ನು ಓಡಿಸಿಕೊಳ್ಳುತ್ತೇವೆ ಎನ್ನುವಂಥ ಬೇಡಿಕೆಯನ್ನು ಸಲ್ಲಿಸುತ್ತೇನೆ. ದಯವಿಟ್ಟು ಅದನ್ನಾದರೂ ಮಾಡಿಕೊಡಬೇಕು. 9 ತಿಂಗಳು ಆಯಿತು ಈ ಸರ್ಕಾರ ಅಧಿಕಾರಕ್ಕೆ ಬಂದು. ನನ್ನ ಕ್ಷೇತ್ರಕ್ಕೆ ಒಂದು ಬಸ್ಸು ಸಹ ಹಾಕಿಸಿಲ್ಲ. ಇದು ನನ್ನ ಸಾಧನೆ. ಇದು ಬಹುತೇಕ ಶಾಸಕರಿಗೆ ಇರತಕ್ಕಂಥ ಪರಿಸ್ಥಿತಿ ಕೂಡ ಆಗಿದೆ. ನೀವು ನಗರ ಪ್ರದೇಶ, ಪಟ್ಟಣ ಪ್ರದೇಶಗಳಿಗೂ ಮತ್ತು ಗ್ರಾಮೀಣ ಪ್ರದೇಶಗಳಿಗೆ ತುಂಬಾ ತಾರತಮ್ಯ ಮಾಡುತ್ತೀದ್ದೀರಿ. ದಯವಿಟ್ಟು ಇವತ್ತು ಅಧಿಕಾರ ವಿಕೇಂದ್ರಿಕರಣ ಮಾಡಿದಂಥದ್ದು ಗ್ರಾಮಪಂಚಾಯಿತ ಕಛೇರಿ ಇದೆ. ಬಸ್ಸು ಇಲ್ಲದೆ ಯಾವ ರೀತಿಯಾಗಿ ಜನ ಅಲ್ಲಿಗೆ ಹೋಗುತ್ತಾರೆ. ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಖಾಸಗಿಯವವು ಮತ್ತು ಸರ್ಕಾರಿ ಬಸ್ಸುನವರ ಮಧ್ಯೆ ಹೊಂದಾಣಿಕೆ ಇಟ್ಟುಕೊಂಡಿದ್ದಾರೆ. ನೀವು ಅವರು ಇವರು ಎಂದು ಜಗಳ ಮಾಡುವುದು ಸರಿಯಲ್ಲ. ಆರ್.ವೈ.ಎ. ಮೀಟಿಂಗನಲ್ಲಿ ಇದೇ ಒಂದು ದೊಡ್ಡ ಜಗಳ. ಅವರು ಯಾವ ರೀತಿ ಲಂಚ ಕೊಡುತ್ತಾರೋ ? ಏನು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತಾರೋ ?

ಈ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ ಸ್ವಾಮಿ. ಗ್ರಾಮೀಣ ಪ್ರದೇಶಗಳಿಗಂತೂ ಅತ್ಯಂತ ತಾರತಮ್ಯ ಆಗಿದೆ. ಇದು ಎಲ್ಲಾ ಸದಸ್ಯರ ಒಂದು ಅಭಿಪ್ರಾಯ. ನೀವು ೯ ತಿಂಗಳು ಕಳೆದ ಮೇಲಾದರೂ ಮಾಡಿ.

(ಗೊಂದಲ)

ಅಧ್ಯಕ್ಷರು : ಶಿವಪ್ಪನವರೇ ಎಲ್ಲಾ ಪ್ರಶ್ನೆ ಮೇಲೆ ಎಲ್ಲರೂ ಕೈ ಎತ್ತಿ ಸಪ್ಲಿಮೆಂಟರಿ ಕೇಳಿದರೆ ನಾನು ಸಭೆ ನಡೆಸುವುದು ಹೇಗೆ? ಅಲ್ಲಿಗೂ ನಾನು ಮುಖ್ಯವಾದ ಪ್ರಶ್ನೆಗಳ ಮೇಲೆ 8-10 ಸಪ್ಲಿಮೆಂಟರೀಸಗೆ ಅಲೋ ಮಾಡುತ್ತಾ ಇದ್ದೇನೆ. This is unheard of. This is a very important question; you can participate on the demands, please. ಒಂದು ದಿವಸ ಪ್ಯಾನಲ್‌ನಲ್ಲಿ ಸ್ವಲ್ಪ ಹೊತ್ತು ಕೂರಿಸುತ್ತೇನೆ. ಆಗ ಗೊತ್ತಾಗುತ್ತದೆ.

ಶ್ರೀ ಬಸವನಗೌಡ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಿನ್ನೆಯೂ ಬಂದಿತ್ತು. ಆದರೆ ತಾವು ಇವತ್ತು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಸಾರಿಗೆ ಸಚಿವರು ಈಗಾಗಲೇ ಹೇಳಿದರು. ಡಬಲ್ ಡೋರ್ ವ್ಯವಸ್ಥೆಯನ್ನು ಪ್ರತಿ ತಾಲ್ಲೂಕಿಗೆ 5 ಬಸ್ಸುಗಳನ್ನು ಓಡಿಸುತ್ತೇವೆಂದು ಹೇಳಿದ್ದಾರೆ. ಅದನ್ನೇ ಜಿಲ್ಲಾ ಕೇಂದ್ರದ ಪ್ರದೇಶಗಳಲ್ಲಿ ಕನಿಷ್ಟ 10 ಬಸ್ಸುಗಳನ್ನಾದರೂ ಓಡಿಸುವ ವ್ಯವಸ್ಥೆ ಮಾಡಬೇಕು. ಯಾಕೆಂದರೆ ವಿಶೇಷವಾಗಿ ಜಿಲ್ಲಾಕೇಂದ್ರಗಳಲ್ಲಿ ಬಹಳ ಸಮಸ್ಯೆ ಇರುತ್ತದೆ. ಬಿಜಾಪುರ ನಗರಕ್ಕೆ ಇನ್ನೊಂದು 10 ಬಸ್ಸುಗಳನ್ನು ಒದಗಿಸಬೇಕು.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದರು. ಈ 12 ಕಿ. ಮೀಟರ್‌ಗೆ ಆಗಲಿ, 22 ಕಿ.ಮೀ. ಗೆ ಆಗಲಿ, 30 ಕಿ.ಮೀ.ಗೆ ಆಗಲಿ ಬಸ್ಸಿನ ವ್ಯವಸ್ಥೆ ಮಾಡಿ. ಆದರೆ ಇದು ರಾಜಕೀಯದ ಒತ್ತಡ, ಅವರ ಪ್ರಭಾವದ ಮೇಲೆ ಕೆಲವೇ ನಗರ ಪ್ರದೇಶಕ್ಕೆ ಅನ್ವಯಿಸುತ್ತೀರೋ? ಅದೂ ಕೂಡ ತಾವು ಏನು ಹೊಸ ಬಸ್ಸುಗಳನ್ನು ತೆಗೆದುಕೊಂಡು ಇಲ್ಲಿಗೆ ಕೊಡುತ್ತೇವೆಂದು ಹೇಳುತ್ತೀರಿ. ಬಹುತೇಕ ಹೊಸ ಬಸ್ಸುಗಳ ಏನು ರಿಪ್ಲೇಸ್‌ಮೆಂಟ್ ಕೊಟ್ಟಿದ್ದೀರಿ, ಅವು ಯಾವುದೂ ಗ್ರಾಮಾಂತರ ಪ್ರದೇಶಗಳಲ್ಲಿ ಓಡಿಸುತ್ತಾ ಇಲ್ಲ. ಅದರ ಬಗ್ಗೆ ತಾವು ದಯವಿಟ್ಟು ಹೇಳಬೇಕು.

ಶ್ರೀ ಚಂದ್ರಶೇಖರ ಸಿ. ಮಾಮನಿ : ನನಗೆ ಮಾತನಾಡಲು ಅವಕಾಶ ಕೊಡಿ. ನಿಮಗೆ ಬೇಜಾರು ಆಗುವುದಾದರೆ ಬೇಡ.

ಅಧ್ಯಕ್ಷರು : ಇಲ್ಲ, ಇಲ್ಲ, ನನಗೇನೂ ಬೇಜಾರು ಇಲ್ಲ. ನೀವು ತಿಳಿದುಕೊಳ್ಳಬೇಕಷ್ಟೆ. ನನ್ನ ಕಷ್ಟ ಕೂಡ ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಂದಕ್ಕೂ ಉಪ ಪ್ರಶ್ನೆ ಕೇಳುತ್ತೀರಿ. ನಾನು ಹೇಗೆ ಸದನ ನಡೆಸಬೇಕು?

ಶ್ರೀ ಚಂದ್ರಶೇಖರ ಸಿ. ಮಾಮನಿ : ತಾವು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಕ್ಕೆ ಕೇಳಿದ್ದೇನೆ. ನಾವು ಅಸೆಂಬ್ಲಿ ಮುಗಿಸಿ ಶನಿವಾರ ಭಾನುವಾರ ಊರಿಗೆ ಹೋಗುತ್ತೇವೆ. ಆದರೆ ಅಲ್ಲಿ

ಷೆಡ್ಯೂಲ್‌ಗಳನ್ನು ಸರ್ಕಾರ ಬಂದ್ ಮಾಡಿದ್ದಾರೆ. ಇದಕ್ಕೆ ಏನು ಒಂದು ವ್ಯವಸ್ಥೆ ಮಾಡುತ್ತೀರಿಯೋ ಇದನ್ನು ಅನೇಕ ಬಾರಿ ನಾವು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡರೂ ಕೂಡ, ಅಲ್ಲಿಗೆ ಬಸ್ಸುಗಳ ವ್ಯವಸ್ಥೆ ಸರಿಯಾಗಿ ಮಾಡಿಲ್ಲ. ಇಲ್ಲಿರುವ 13 ಬಸ್ಸುಗಳು 8 ಲಕ್ಷ ಕಿ.ಮೀ. ದಾಟಿ ಓಡುತ್ತಾ ಇದ್ದಾವೆ. ಇನ್ನು ಕೆಲವು ಬಸ್ಸುಗಳು ಎಲ್ಲಿ ಹೋಗುತ್ತವೆಯೋ ಅಲ್ಲಿಯೇ ನಿಂತುಬಿಡುತ್ತವೆ. ಇದರ ಬಗ್ಗೆ ಯೋಗ್ಯವಾದಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೆ, ನನ್ನ ಸಲಹೆಯೇನೆಂದರೆ ಕೆ.ಎಸ್.ಆರ್.ಟಿ.ಸಿ ಯಲ್ಲಿ ಒಟ್ಟಾರೆ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಆದ್ದರಿಂದ ತಾವು ದಯಮಾಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಗಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಈ ಗ್ಲಾಟೆಯಲ್ಲಿ ಎಂಟತ್ತು ಬಸ್ಸುಗಳನ್ನು ಪ್ರಯಾಣಿಕರಿಗೆ ಕೊಡುತ್ತೇನೆಂದು ಹೇಳಿದ್ದೀರಿ, ಅದನ್ನು ಕೊಡುತ್ತೀರೋ ಇಲ್ಲವೋ? ಪ್ರಶ್ನೆಯನ್ನು ಕೇಳಿದಾಗಲೇ ಉತ್ತರವನ್ನು ಹೇಳಿಬಿಟ್ಟರೆ, ನಮಗೆ ಸಮಾಧಾನವಾಗುತ್ತದೆ. ತಾವು ಮೂಲ ಪ್ರಶ್ನೆಗೆ ಉತ್ತರವನ್ನು ಕೊಟ್ಟುಬಿಟ್ಟರೆ ಒಳ್ಳೆಯದು.

ಶ್ರೀ ಕೆ.ಎನ್. ನಾಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ತರವಾದ ಪ್ರಶ್ನೆ, ಕಾರಣಗಳು ಬೇಕಾದಷ್ಟು ಇದೆ. ಇದರ ಬಗ್ಗೆ ಗಂಟೆಗಟ್ಟಲೆ ಮಾತನಾಡಿದರೂ ಈ ಸಮಸ್ಯೆ ಬಗೆಹರಿಯುವುದಿಲ್ಲ. ಒಂದು ಸಮಸ್ಯೆಯನ್ನು ತಾವು ಬಗೆಹರಿಸಬೇಕು. ಅದೇನೆಂದರೆ ಕನಿಷ್ಟ ಪಕ್ಷ ಎರಡು ಸಾವಿರ ಬಸ್ಸುಗಳನ್ನು ಕೆ.ಎಸ್.ಆರ್.ಟಿ.ಸಿ.ಯವರು ಮೊದಲು ಕೊಂಡುಕೊಳ್ಳತಕ್ಕದನ್ನು ಮಾಡಬೇಕು. ಒಂಭತ್ತು ತಿಂಗಳಾದರೂ ಸಹ ಈ ಕೆಲಸವನ್ನು ಮಾಡಿಲ್ಲ. ನಿಮ್ಮ ಕೆ.ಎಸ್.ಆರ್.ಟಿ.ಸಿ. ಯವರು ಮತ್ತು ಖಾಸಗಿಯವರು ಶಾಮೀಲಾಗಿ ಒಳ್ಳೆಯ ಮತ್ತು ಆದಾಯ ಬರುವ ರೂಟ್‌ಗಳಲ್ಲಿ ಖಾಸಗಿಯವರು ಬಸ್ಸುಗಳನ್ನು ಓಡಿಸುವ ಅಲಕ್ಷವಿರುವ ರಸ್ತೆಗಳಲ್ಲಿ, ಮಾರ್ಗಗಳಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಓಡಿಸುವ ವ್ಯವಸ್ಥೆಯಾಗಿದೆ. ಅದೆಲ್ಲಕ್ಕಿಂತ ಮೂಲಭೂತವಾಗಿ ಮಾಡಬೇಕಾಗಿರುವುದೇನೆಂದರೆ ಇಪ್ಪತ್ತರಿಂದ ಇಪ್ಪತ್ತೈದು ಕಿಲೋಮೀಟರ್‌ಗೆ ಒಂದು ಬಸ್ಸನ್ನು ಓಡಿಸಬೇಕಾದರೆ ನಿಮಗೆ ಎರಡು ಸಾವಿರ ಬಸ್ಸುಗಳು ಬೇಕು. ಇಲ್ಲದಿದ್ದರೆ ಬೆಂಗಳೂರು ನಗರ ಸಾರಿಗೆಯನ್ನು ಖಾಸಗಿಯವರಿಗೆ ಕೊಟ್ಟುಬಿಡಿ. ಮಂಗಳೂರಿನಲ್ಲಿ ಯಾವ ರೀತಿಯಲ್ಲಿ ಮಾಡಿದ್ದಾರೆ ಆ ರೀತಿ ಮಾಡಿ. ನಗರದಲ್ಲಿರುವ ಸಾರಿಗೆ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಕ್ಕೆ ಕೊಡಿ. ಹಳ್ಳಿಗಳಿಗೆ ಜಾಸ್ತಿಬಸ್ಸುಗಳನ್ನು ಕೊಂಡುಕೊಳ್ಳುವುದಿಲ್ಲ ಮಾರ್ಗವನ್ನು ಸರಿಯಾಗಿ ಇಟ್ಟುಕೊಳ್ಳುವುದಿಲ್ಲ ನಿಮ್ಮ ಆರ್.ಟಿ.ಓ. ಸಭೆಗೆ ಎಂ.ಎಲ್.ಏ. ಗಳನ್ನು ಕಳಿಸಿ. ಎಲ್ಲಾ ಕ್ಷೇತ್ರಗಳಲ್ಲೂ ಸಹ ತೀವ್ರವಾದ ಪ್ರತಿಭಟನೆ, ಮಕ್ಕಳ ಪ್ರತಿಬಟನೆ, ಬಸ್ಸುಗಳನ್ನು ಅಡ್ಡ

ಹಾಕುತ್ತಾರೆ, ರಸ್ತೆರೋಕೋ ಮಾಡುತ್ತಾರೆ, ನಾವು ನಮ್ಮಗಳ ಕ್ಷೇತ್ರಕ್ಕೆ ಹೋಗಬೇಕಾದರೆ ಇದೆಲ್ಲವನ್ನೂ ನೋಡುತ್ತೇವೆ. ನೀವೂ ಸಹ ಬೇರೆ ಬೇರೆ ಕ್ಷೇತ್ರದಿಂದ ಗೆದ್ದು ಬಂದಿರುವವರು.

ಅಧ್ಯಕ್ಷರು : ಆಡಳಿತ ಪಕ್ಷದ ಸದಸ್ಯರು ಇಂತಹ ವಿಚಾರವನ್ನು ನಿಮ್ಮ ಪಾರ್ಟಿ ಸಭೆಯಲ್ಲಿ ಚರ್ಚೆ ಮಾಡಿ ಬಗೆಹರಿಸಿಕೊಳ್ಳಬೇಕು. ಇಲ್ಲಿ ಬಂದು ಮಾತನಾಡಿದರೆ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ : ಸ್ಪಷ್ಟವಾದ ಉತ್ತರ ಮಂತ್ರಿಗಳಿಂದ ಬಂದರೆ, ಇದು ಉದ್ಭವವಾಗುವುದಿಲ್ಲ. 5 ಬಸ್ಸುಗಳನ್ನು ಪ್ರತಿ ಕ್ಷೇತ್ರಕ್ಕೆ ಕೊಡುತ್ತೇವೆಂದು ಹೇಳುವುದಕ್ಕೆ ಶುರುಮಾಡಿ 6 ತಿಂಗಳಾಯಿತು.

ಶ್ರೀ ಕೆ.ಎಸ್. ಬೀಳಗಿ: ಮಾನ್ಯ ಸದಸ್ಯರು 2000 ಬಸ್ಸುಗಳನ್ನು ಖರೀದಿ ಮಾಡುವಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲಾ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ಇದನ್ನು ಮೂಲಭೂತವಾಗಿ ನಾನು ಒಪ್ಪುತ್ತೇನೆ. ಈ ವ್ಯವಸ್ಥೆಯಲ್ಲಿ ಬಹಳ ಅಸ್ತವ್ಯಸ್ತ ಆಗಿ ಹೋಗಿದೆ. ಈಗ ಆ ಪರಿಸ್ಥಿತಿ ಒಂದು ಮಟ್ಟಕ್ಕೆ ಬಂದಿದೆ ಅಂತ ತಿಳಿದುಕೊಂಡು

(ಗೊಂದಲ)

ಶ್ರೀ ಹೆಚ್.ಬಿ. ಕೃಷ್ಣಮೂರ್ತಿ : ಈ ವ್ಯವಸ್ಥೆಯನ್ನು ಸರಿ ಮಾಡಿದಿದ್ದರೆ ಆಗುವುದೇ ಇಲ್ಲ. ಗ್ರಾಮೀಣ ಪ್ರದೇಶದ ನಾವು ಯಾರೇ ಶಾಸಕರು ಇರಬಹುದು. ಅದನ್ನು ನಾವು ಎದುರಿಸುವುದು ಬಹಳ ಕಷ್ಟ ಆಗುತ್ತದೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಸದಸ್ಯರು ಹೇಳಿದಂತೆ ಈ ವರ್ಷ 1800 ಹೊಸ ಬಸ್ಸುಗಳನ್ನು ಖರೀದಿ ಮಾಡುವಂತಹ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ಹೊಸ ಬಸ್ಸುಗಳನ್ನು ಪ್ರತಿಯೊಂದು ಕ್ಷೇತ್ರಕ್ಕೆ ಎಷ್ಟು ಎಂದು ಹೇಳಿ ಬಿಟ್ಟರೆ ಒಳ್ಳೆಯದು.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ : ನನಗೆ ಇದನ್ನು ನೋಡಿದರೆ ಬಸ್ ಅವ್ಯವಸ್ಥೆಗಿಂತ ಹೆಚ್ಚಾಗಿ ಅವರ ಒಳಜಗಳಗಳು ಈಗ ಹೊರಗೆ ಬರುತ್ತಾ ಇದೆಯೇನೋ ಎಂದು ನನಗನ್ನಿಸುತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಸಲಹೆಯನ್ನು ಕೊಡುತ್ತೇನೆ ಆ ಕಡೆ ಕುಳಿತಿರುವಂತಹ ಅನೇಕ ಸದಸ್ಯರಿಗೆ ಇಲ್ಲಿ ಉತ್ತರ ಸಿಕ್ಕುತ್ತಿಲ್ಲ. ಒಂದು ದಿವಸ ಪೂರ್ತಿ ಅವರ ವ್ಯಕ್ತ ಮಾಡುವುದಕ್ಕೆ, ಪ್ರಶ್ನೆಗಳಿಗೆ ಉತ್ತರ ತೆಗೆದುಕೊಳ್ಳುವುದಕ್ಕೆ ಮೀಸಲಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಸಲಹೆ ಬಹಳ ಚೆನ್ನಾಗಿದೆ.

(ಗೊಂದಲ)